# ಅಂಗುಟ ಮಾತುರವೆಂಬ ಮೂರುತಿ ಪರೀಕ್ಷಿಸಿತು

**(ಉಡುಪಿ ಕೃಷ್ಣ ಸುಳಾದಿ)**

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 101.
2. **Ref.:** Samagra Dasa Sahitya, Samputa 4, published by Kannada & Culture Dept, Govt of Karnataka, Bengaluru, page No. 142.
3. **Ref.:** Purandara Dasara Suladigalu – Edited by Shri Pavanje Gururao, Sriman Madhwa Siddantha Granthalaya, Udupi (1927), page No. 12.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 are slightly different and are not considered here.

**ಧ್ರುವ ತಾಳ ॥**

ಅಂಗುಟ ಮಾತುರವೆಂಬ ಮೂರುತಿ ಪರೀಕ್ಷಿಸಿತು

ಕಂಡು ಕಂಡರಸಿಕೊಂಬ ಕಮನೀಯ ಮೂರುತಿಯು

ಆತುಮ ಮೂರುತಿ ಅಂತರಾತುಮ ಮೂರುತಿಯು

ಬಿಂಬ ಮೂರುತಿ ಜೀವದಾಕಾರ ಮೂರುತಿಯು

ಅಣುರೇಣುವೆಂಬ ಚಿನ್ಮಯ ಮೂರುತಿಯು

ಮುನಿಗಳ ಹೃದಯದೊಳು ಮಿನುಗುವ ಮೂರುತಿಯು

ಬೊಮ್ಮಗಾದಾ ಮೂರುತಿಯು ತಾನೆಲ್ಲಿಂದೆಲ್ಲಿ ಬಂದಿತು

ಅಮರರಾಭರಣ ತಾನೆಲ್ಲಿಂದೆಲ್ಲಿಗೊದಗಿತೊ

ಎನಗೆ ಪ್ರಸನ್ನನಾದ ಉಡುಪಿಯ ಕೃಷ್ಣ ಮೂರುತಿ

ಪುರಂದರ ವಿಠಲನ ಒಲುಮೆಯೆಂತೊ ॥ 1 ॥

**ಮಟ್ಟೆ ತಾಳ** ॥

ಮಂದಾರ ಮಲ್ಲಿಗೆ ತುರುಬಲಿ ದಿವ್ಯಾಂಬರವನುಟ್ಟು ಗೋ–

ವಿಂದನಾಡುವ ನಾಟ್ಯಂಗಳಾ ಪ್ರಬಂಧ ಗೀತಗಳ

ಚಂದ ಚಂದಲಿ ಪಾಡಿದಳು ಮೊಸರ ಮಥನದಲಿ ತನ್ನ

ಕಂದನ ಅದ್ವಿತೀಯ ಅಪ್ರಮೇಯಾಗಮ್ಯ ಗೋಚರನೆಂದು

ನಂದವ್ರಜವೆತ್ತ ಉಡುಪಿಯ ಕೃಷ್ಣನ ಮಹಿಮೆಯೆತ್ತಲೆಂದು

ವೃಂದಾರಕ ವಂದ್ಯ ವಂದಿತ ಪುರಂದರ ವಿಠಲನೆ ಬಲ್ಲನೆನುತಿರೆ ॥ 2 ॥

**ತಾಳ: ತ್ರಿವಿಡೆ**

ಪೊಂಬಟ್ಟೆ ಪಾಲ್ಮೊಸರಿಂದಲಿ ತೋದಿದೆ

ಕಂಬು-ಕಂಧರ ಕೆನೆ ಬೆಣ್ಣೆಯಲೊರೆದಿದೆ

ಅಂಬುಜನಾಭ ನೀ ಎಲ್ಲೆಲ್ಲಿ ತುಡುತಿಂದೆ

ಎಂಬ ಗೋಪಿಗೆ ಕೃಷ್ಣ ಅಂಜುತ್ತಿದ್ದುದ ಕಂಡೆ

ಅಂಬುಜಭವಪಿತ ಈ ಉಡುಪಿಯ ಕೃಷ್ಣ

ತಾಂ ಬಾಲಕನಾದ ಪುರಂದರ ವಿಠ್ಠಲ ॥ 3 ॥

**ತಾಳ: ಅಟ**

ದೇವತರುವು ನಮ್ಮ ದೇವ ಕೊಳಲನೂದೆ

ದೇವ ನಾರಿಯರುಟ್ಟ ದೇವಾಂಗದುಗುಲವ

ಆವ ಸು-ಸ್ವರವೊ ಆವ ಸು-ಜಾತಿಯೊ

ಆವ ಮುರ್ಚ್ಛನವೊ ಆವ ಸು-ನಾದವೊ

ದೇವ ಪುರಂದರ ವಿಠಲನಂಘ್ರಿಗಳಾಣೆ

ಈ ಉಡುಪಿಯ ಕೃಷ್ಣನಾದಿ ಮೂರುತಿ ತಪ್ಪಾ ॥ 4 ॥

**ತಾಳ**: **ಆದಿ**

ಒಂದು ಕೈಯಲಿ ಕಡೆಗೋಲು ಮ–

ತ್ತೊಂದು ಕೈಯಲಿ ಕಡೆವ ನೇಣು

ನಿಂದು ತಾಯ ಮೊಗವ ನೋಡಿ

ನಂದನ ಕಂದ ನಲಿದಾಡುತ ಧಿಂ ಧಿಂ ಧಿಂ

ಧಿಂ ಧಿತ ಮುದ್ದು ಪುರಂದರ ವಿಠಲ

ಉಡುಪಿಯ ಕೃಷ್ಣ ॥ 5 ॥

**ಜತೆ** ॥

ಉಡುಪಿಯ ಸಿರಿ ಕೃಷ್ಣ ಪುರಂದರ ವಿಠಲ

ಬಿಡೆನೊ ಬಿಡೆನೊ ನಿನ್ನ ಚರಣ ಕಮಲವ ॥ 6 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಈ ಸುಳಾದಿಯಲ್ಲಿ ಪರಮಾತ್ಮನು ಅಂಗುಷ್ಟ ಮಾತ್ರ ರೂಪವುಳ್ಳವನೆಂದು ಕಾಠಕ ಉಪನಿಷತ್ತಿನಲ್ಲಿ (ಅಧ್ಯಾಯ ೨, ವಲ್ಲಿ ೧) ಹೇಳಿದದನ್ನು ದಾಸರು ವಿವರಿಸಿದ್ದಾರೆ. ಪರಮಾತ್ಮನು ಈ ರೂಪವುಳವನಿದ್ದರೂ, ಬೇರೆ ಬೇರೆ ಭಕ್ತರಿಗೆ ಬೇರೆ ಬೇರೆ ರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಪರಮಾತ್ಮನು ತಮಗೆ ಉಡುಪಿಯ ಕೃಷ್ಣನ ರೂಪದಲ್ಲಿ ಕಾಣಿಸಿಕೊಂಡದ್ದನ್ನು ದಾಸರು ವರ್ಣಿಸಿದ್ದಾರೆ.

**೧. ಕಂಡು ಕಂಡು ಅರಸಿಕೊಂಬ** = ಪರಮಾತ್ಮನ ಸ್ವರೂಪವು ತಿಳಿದು ತಿಳಿದೂ ಮತ್ತೂ ತಿಳಿಯದಂತೆ ಆಗಿ, ಹುಡುಕಿಸಿಕೊಳ್ಳುವ.

**ಬಿಂಬ ಮೂರುತಿ** = ಪರಮಾತ್ಮನು ಬಿಂಬ ಸ್ವರೂಪನು

**ಜೀವದಾಕಾರ ಮೂರುತಿ** = ಬೇರೆ ಬೇರೆ ಜೀವಿಗಳಲ್ಲಿ ಬೇರೆ ಬೇರೆ ಜೀವಿಗಳಾಕಾರದಲ್ಲಿ ಇರುವವನು

**೨. ಪ್ರಬಂಧ ಗೀತ** = ಸಂಗೀತ ಯೋಗ್ಯ ಗೀತಗಳು

**ಗೋಪಿ** = ಯಶೋದೆ

**ವಜ್ರ** = ಗೋಕುಲ

**೩. ಪೊಂಬಟ್ಟೆ** = ಪೀತಾಂಬರ

**ಒರೆ** = ತುಂಬು

**ತುಡು** = ಕಳವು ಮಾಡು

**೪. ಜಾತಿ** = ಸಂಗೀತದ ಮೂಲ ಸಪ್ತ ಸ್ವರಗಳು

**ಮೂರ್ಚ್ಛನಾ** = ಸ್ವರ ಸೌಂದರ್ಯದ ಸ್ಥಾಯಿತ್ವ

**ವಿ.ಸೂ.: -** ಈ ನುಡಿಯ ಮೊದಲಿನ ಎರಡು ಸಾಲುಗಳ ಅರ್ಥವೂ ಸ್ಪಷ್ಟವಾಗುವುದಿಲ್ಲ

**ಕಡೆವ ನೇಣು** = ಕಡೆಗೋಲಿನ ಹಗ್ಗ

**Classification:** Suladi
**Name of Suladi:** uDupi krishNa suLAdi
**Ankita:** purandara vittala
**Location:** NA
**Category:** Krishna Leele, aNu roopa
**Sub-Category:** atma, bimba, jiva, aNu, muni, hrudaya, brahma, abharana, Prasanna, Udupi, Krishna, olume, mallige, govinda, ATa, aprameya, vajra, benne, gopi, yashode, bhaya, deva, kolalu, hennu, nAri, anghri, kai, tayi, padma,
**Pravachana:** NA
**Explanation:** NA